# ಸ್ಪರ್ಧೆಯ ಮುನ್ನವೇ ಚರಿತ್ರೆ ನಿರ್ಮಾಣ!



ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಪದಕ ಗೆದ್ದರೂ ಗೆಲ್ಲದಿದ್ದರೂ ಇತಿಹಾಸದ ಪುಟಗಳಲ್ಲಿ ದಾಖಲಾಗುವ ಒಬ್ಬ ಅಥ್ಲೀಟ್ ಹೆಸರೆಂದರೆ ಲೌರೆಲ್ ಹಬರ್ಡ್‌ಳದು. ಏಕೆಂದರೆ, ಒಲಿಂಪಿಕ್ಸ್ ಸ್ಪರ್ಧೆಯಲ್ಲಿ ಪಾಲ್ಗೊಂಡ ಮೊದಲ ಲಿಂಗಪರಿವರ್ತಿತ ಸ್ಪರ್ಧಿ ಎನ್ನುವ ಶ್ರೇಯ ಅವಳದಾಗಿದೆ. ಕ್ರೀಡಾ ಕುಂಭಮೇಳದಲ್ಲಿ ಅವಳ ಹೆಸರು ಅಜರಾಮರವಾಗಿ ಉಳಿಯಲಿದೆ. ಮಹಿಳೆಯಾಗಿ ಪರಿವರ್ತನೆಯಾಗಿರುವ ಈ ವ್ಯಕ್ತಿಗೆ ಮಹಿಳಾ ವಿಭಾಗದಲ್ಲಿ ಸ್ಪರ್ಧಿಸಲು ಅವಕಾಶ ನೀಡುವ ಕ್ರಮ ಸರಿಯಲ್ಲ ಎನ್ನುವ ಟೀಕೆಗಳು ಕೇಳಿಬಂದರೂ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಅದಕ್ಕೆ ಸೊಪ್ಪು ಹಾಕಿಲ್ಲ. ಮಹಿಳೆಯರ ವಿಭಾಗದ ವೇಟ್ ಲಿಫ್ಟಿಂಗ್ ಸ್ಪರ್ಧೆಗೆ (87 ಕೆ.ಜಿ. ಮೇಲ್ಪಟ್ಟ) ಲೌರೆಲ್‌ಳನ್ನು ಆಯ್ಕೆ ಮಾಡಿದ ನ್ಯೂಜಿಲೆಂಡ್ ಕ್ರಮಕ್ಕೆ ಐಒಸಿ ಬೆಂಬಲ ವ್ಯಕ್ತಪಡಿಸಿದೆ.

ನಿಯಮಾವಳಿಗೆ ಅನುಸಾರವಾಗಿಯೇ ಲೌರೆಲ್ ಸ್ಪರ್ಧಿಸಲು ಅವಕಾಶ ಗಿಟ್ಟಿಸಿದ್ದಾಳೆ ಎನ್ನುತ್ತಾರೆ ಐಒಸಿ ಅಧ್ಯಕ್ಷ ಥಾಮಸ್ ಬಾಕ್. ಲಿಂಗಪರಿವರ್ತಿತ ಕ್ರೀಡಾಪಟುಗಳ ಸ್ಪರ್ಧೆಗೆ ಸಂಬಂಧಿಸಿದಂತೆ ಭವಿಷ್ಯದಲ್ಲಿ ವಿಸ್ತೃತವಾದ ಮಾರ್ಗಸೂಚಿಯನ್ನು ರೂಪಿಸುವ ಕುರಿತು ಚಿಂತಿಸಲಾಗುತ್ತಿದೆ ಎಂದೂ ಅವರು ಹೇಳುತ್ತಾರೆ.

ಆಧುನಿಕ ಒಲಿಂಪಿಕ್ ಕೂಟ 125 ವರ್ಷಗಳ ಚರಿತ್ರೆಯನ್ನು ಹೊಂದಿದೆ. ಲಿಂಗಪರಿವರ್ತಿತ ಕ್ರೀಡಾಪಟುಗಳಿಗೆ 2004ರಲ್ಲೇ ಒಲಿಂಪಿಕ್ಸ್‌ನ ಬಾಗಿಲು ತೆರೆಯಲಾಗಿದೆ. ಆದರೆ, ಇದುವರೆಗೆ ಈ ಸಮುದಾಯದ ಒಬ್ಬ ಕ್ರೀಡಾಪಟುವೂ ಸ್ಪರ್ಧೆಯಲ್ಲಿ ಪಾಲ್ಗೊಂಡಿರಲಿಲ್ಲ. ಲಿಂಗಪರಿವರ್ತನೆ ಮಾಡಿಕೊಂಡ ಕ್ರೀಡಾಪಟುಗಳಿಗೆ ಅವಕಾಶ ನೀಡುವ ಸಂಬಂಧ ಐಒಸಿ 2015ರಲ್ಲಿ ನಿಯಮಾವಳಿ ರೂಪಿಸಿದೆ. ಅದರ ಪ್ರಕಾರ, ಗಂಡಾಗಿ ಹುಟ್ಟಿ, ಲಿಂಗ ಪರಿವರ್ತನೆ ಮಾಡಿಸಿಕೊಂಡ ವ್ಯಕ್ತಿಯ ರಕ್ತದಲ್ಲಿ ಟೆಸ್ಟೊಸ್ಟೆರೋನ್ ಹಾರ್ಮೋನ್‌ಗಳ ಪ್ರಮಾಣ 10 ನ್ಯಾನೊಮೋಲ್‌ಗಳಿಗಿಂತ (ಪ್ರತೀ ಲೀಟರ್‌ಗೆ) ಹೆಚ್ಚಿರದಿದ್ದರೆ ಆ ವ್ಯಕ್ತಿ ಮಹಿಳಾ ವಿಭಾಗದಲ್ಲಿ ಸ್ಪರ್ಧಿಸಲು ಅರ್ಹ (ಈ ಪರೀಕ್ಷೆ ಕೂಟ ನಡೆಯುವುದಕ್ಕಿಂತ 12 ತಿಂಗಳು ಮೊದಲು ಆಗಿರಬೇಕು). ಲೌರೆಲ್ ಅವಕಾಶ ಗಿಟ್ಟಿಸಿದ್ದು ಈ ನಿಯಮದ ಆಧಾರದ ಮೇಲೆಯೇ.

ಐಒಸಿಯ ಈ ನಿರ್ಧಾರ 43 ವರ್ಷದ ಕ್ರೀಡಾಪಟು ಲೌರೆಲ್‌ಗೆ ಭರಿಸಲಾಗದಷ್ಟು ಹರ್ಷ ತಂದಿದೆ. ಇದೇ ವಿಭಾಗದಲ್ಲಿ ಸ್ಪರ್ಧಿಸಲಿರುವ ಇಂಗ್ಲೆಂಡ್‌ನ ಎಮಿಲಿ ಕ್ಯಾಂಪ್‌ಬೆಲ್, ಲೌರೆಲ್ ಸ್ಪರ್ಧೆಯನ್ನು ಬೆಂಬಲಿಸುವೆ ಎನ್ನುತ್ತಾರೆ. ‘ಆಕೆಯೂ ಒಬ್ಬ ಮನುಷ್ಯಳು. ನಮ್ಮೆಲ್ಲರಂತೆಯೇ ಬೇರೆ ಸ್ಪರ್ಧೆಗಳಲ್ಲಿ ಭಾಗವಹಿಸಿ ಒಲಿಂಪಿಕ್ ಕೂಟಕ್ಕೆ ಅರ್ಹತೆ ಗಿಟ್ಟಿಸಿದ್ದಾಳೆ. ಇಲ್ಲಿ ವಿರೋಧ ಮಾಡುವುದು ಏನಿದೆ’ ಎಂದು ಎಮಿಲಿ ಪ್ರಶ್ನಿಸುತ್ತಾಳೆ.

ಮಾಧ್ಯಮ ಎಂದೊಡನೆ ಮಾರುದ್ದ ಹಿಂದೆ ಸರಿಯುವ ಲೌರೆಲ್, ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸುವ ತಂಡದಲ್ಲಿ ತನ್ನನ್ನೂ ಆಯ್ಕೆ ಮಾಡಿದ್ದಕ್ಕೆ ನ್ಯೂಜಿಲೆಂಡ್ ಒಲಿಂಪಿಕ್ ಸಮಿತಿಗೆ ಕೃತಜ್ಞತೆ ಅರ್ಪಿಸಿದ್ದಾಳೆ. ಅವಳ ತಂದೆ ಡಿಕ್ ಹಬರ್ಡ್, ಆಕ್ಲೆಂಡ್‌ನ ಮೇಯರ್ ಆಗಿದ್ದವರು. ಹಬರ್ಡ್ ಫುಡ್ಸ್ ಎಂಬ ದೊಡ್ಡ ಉದ್ಯಮವನ್ನೂ ಕಟ್ಟಿ ಬೆಳೆಸಿದವರು. ಮಗಳ ಕನಸುಗಳಿಗೆ ನೀರೆರೆದವರು.

ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಗಮನಸೆಳೆಯುವ ಮುಂಚೆ ಲೌರೆಲ್, ಗೆವಿನ್ ಎಂಬ ಪುರುಷ ಕ್ರೀಡಾಪಟುವಾಗಿ ನ್ಯೂಜಿಲೆಂಡ್‌ನ ರಾಷ್ಟ್ರೀಯ ಕಿರಿಯರ ಸ್ಪರ್ಧೆಗಳಲ್ಲಿ ಹಲವು ದಾಖಲೆಗಳನ್ನು ಮೆಟ್ಟಿ ನಿಂತಿದ್ದು ಈಗ ಇತಿಹಾಸ. 2012ರಲ್ಲಿ ಹಾರ್ಮೋನ್ ಚಿಕಿತ್ಸೆ ಪಡೆಯುವ ಮೂಲಕ ಮಹಿಳೆಯಾಗಿ ಪರಿವರ್ತನೆಗೊಂಡಳು. ನಂತರದ ದಿನಗಳಲ್ಲೂ ಲೌರೆಲ್ ಸಾಧನೆ ಪರಿಣಾಮಕಾರಿಯಾಗಿದೆ. 2018ರ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೂ ಆಕೆ ಅರ್ಹತೆ ಗಿಟ್ಟಿಸಿದ್ದಳು. ಆದರೆ, ಗಾಯದ ಸಮಸ್ಯೆ ಕಾರಣ ಕೊನೆಯ ಕ್ಷಣದಲ್ಲಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದಳು. 2020ರಲ್ಲಿ ರೋಮ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಪ್ರತಿನಿಧಿಸಿದ್ದ ಆಕೆ, ಚಿನ್ನದ ಪದಕವನ್ನು ಹೆಕ್ಕಿ ತಂದಿದ್ದಳು. ತನ್ನ ಸ್ಪರ್ಧಾ ವಿಭಾಗದಲ್ಲಿ ಈಗ ಆಕೆ ವಿಶ್ವದ ನಂಬರ್ 1 ಕ್ರೀಡಾಪಟು ಎನಿಸಿದ್ದಾಳೆ.

ಭಾರ ಎತ್ತುವ ಸ್ಪರ್ಧೆಗಳಲ್ಲಿ ಸ್ನಾಯುಗಳ ಬಲವೇ ಮುಖ್ಯ. ಮೊದಲು ಪುರುಷನ ಶಕ್ತಿಯನ್ನು ಹೊಂದಿ, ಬಳಿಕ ಹಾರ್ಮೋನ್ ಚಿಕಿತ್ಸೆ ಮೂಲಕ ಮಹಿಳೆಯಾದ ವ್ಯಕ್ತಿಗೆ ಮಹಿಳೆಯರೊಂದಿಗೆ ಸ್ಪರ್ಧಿಸಲು ಅವಕಾಶ ನೀಡಿರುವುದು ಯಾವ ಕಾರಣಕ್ಕೂ ಸರಿಯಾದ ಕ್ರಮವಲ್ಲ. ಏಕೆಂದರೆ, ಮೊದಲಿನ ಪುರುಷ ದೇಹದ ಹಲವು ಲಾಭಗಳು ಅವಳಿಗೆ ಸಿಗಲಿವೆ ಎಂಬುದು ಲೌರೆಲ್ ಸ್ಪರ್ಧೆಯನ್ನು ವಿರೋಧಿಸುತ್ತಿರುವವರು ಮುಂದಿಡುವ ವಾದ.

ಲೌರೆಲ್ ಸ್ಪರ್ಧೆಗೆ ಸಂಬಂಧಿಸಿದ ವಾದ ಪ್ರತಿವಾದಗಳು ಏನೇ ಇರಲಿ, ಅವಳಂತೂ ಈಗ ಸ್ಪರ್ಧೆಗೆ ಅವಕಾಶ ಗಿಟ್ಟಿಸಿದ್ದಾಗಿದೆ. ಇದುವರೆಗೆ ಕ್ರೀಡಾ ಮುಖ್ಯವಾಹಿನಿಯಿಂದ ದೂರವೇ ಉಳಿದಿದ್ದ ಮಾನವ ಸಮುದಾಯವೊಂದಕ್ಕೆ ಅವಳ ಸ್ಪರ್ಧೆಯಿಂದ ನವೋತ್ಸಾಹ ಬಂದಿದೆ. ಕೂಟದಲ್ಲಿ ಅತಿರಥ ಮಹಾರಥ ಎನಿಸುವಂತಹ ಹಲವು ಅಥ್ಲೀಟ್‌ಗಳು ಇದ್ದರೂ ಜಗತ್ತಿನ ಗಮನ ಲೌರೆಲ್‌ಳ ಸಾಧನೆಯತ್ತ ಕೇಂದ್ರೀಕೃತವಾಗಿದೆ. ಎಲ್ಲ ಅರ್ಥದಲ್ಲೂ ಲಿಂಗ ಸಮಾನತೆ ಸಾಧಿಸುವತ್ತ ಈ ಸಲದ ಒಲಿಂಪಿಕ್ ಕೂಟ ಮನುಕುಲಕ್ಕೆ ನೀಡಿದ ಕೊಡುಗೆ ಇದಾಗಿದೆ. ಲೌರೆಲ್ ಆ ಕೊಡುಗೆಯ ಕೇಂದ್ರಬಿಂದು ಆಗಿದ್ದಾಳೆ!

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65